# ಓರ್ವ ಯಶಸ್ವಿ ಮುಖ್ಯ ಮಂತ್ರಿ ಆರ್ಥಿಕ ತಜ್ಞರಾಗಿರಬೇಕೆ?

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಶ್ರೀ ನರೇಂದ್ರ ಮೋದಿಗೆ ಅರ್ಥವಾಗುವ ಅರ್ಥಶಾಸ್ತ್ರವನ್ನು ಅಂಚೆ ಚೀಟಿಯ ಹಿಂಬದಿ ಬರೆಯಬಹುದು ಎಂದು ಹಣಕಾಸು ಸಚಿವರಾದ ಶ್ರೀ ಪಿ. ಚಿದಂಬರಂ ಟೀಕಿಸಿದ್ದಾರೆ. ಅರ್ಥಶಾಸ್ತ್ರದ ನೆಚ್ಚಿನ ವಿದ್ಯಾರ್ಥಿ ಹಾಗೂ ಭಾರತದ ಜಿಡಿಪಿ ವೃದ್ಧಿದರವನ್ನು ಶೇಕಡ 5ಕ್ಕೆ ಇಳಸುವ ಕೀರ್ತಿಗೆ ಪಾತ್ರರಾದ ಅವರಿಂದ ಈ ಹೇಳಿಕೆ ಕೇಳ ಬಂದಿದೆ.

ಆರ್ಥಿಕ ಬುದ್ಧಿವಂತಿಕೆಯ ಪ್ರಧಾನ ಪೋಷಕರೆಂಬ ಭ್ರಮೆ ಶ್ರೀ ಚಿದಂಬರಂ ಅವರಿಗೆ ಇದ್ದಂತಿದೆ. ಆರ್ಥಿಕ ನಿರ್ವಹಣೆಯ ಜವಾಬ್ದಾರಿ ಹೊಂದಿರುವ ಯುಪಿಎ ಸರ್ಕಾರದ ಬುದ್ಧಿವಂತರ ತಂಡದೊಂದಿಗೆ ಚಿದಂಬರಂ ಅವರು ದೇಶಕ್ಕೆ ಒಳ್ಳೆಯ ಕನಸು ತೋರುವ ಬದಲು ದುಃಸ್ವಪ್ನ ತೋರಿದ್ದಾರೆ ಎಂದು ಇಲ್ಲಿ ಹೇಳುವುದು ಅಪ್ರಸ್ತುತ. ಅರ್ಥವ್ಯವಸ್ಥೆ ನಿರ್ವಹಿಸುವ ರಾಜಕೀಯ ಆಡಳಿತಗಾರರು ತಮ್ಮ ಶೈಕ್ಷಣಿಕ ಹಿನ್ನಲೆಯಿಂದ ಗುರುತಿಸಿಕೊಳ್ಳುವುದಿಲ್ಲ. ಅವರ ಪರಿಚಯವಾಗುವುದು ಅವರು ಮೂಡಿಸುವ ಸಾಧನೆಗಳ ಹೆಜ್ಜೆ ಗುರುತುಗಳಿಂದ.

ಶ್ರೀ ಪಿ.ವಿ. ನರಸಿಂಹ ರಾವ್ ಹಾಗೂ ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಆರ್ಥಿಕ ವಿಷಯದಲ್ಲಿ ಪಾಂಡಿತ್ಯವಿರಲಿಲ್ಲ. ಸರ್ಕಾರದಲ್ಲಿ ತಜ್ಞರು ವಿಶೇಷ ಹುದ್ದೆಗಳಲ್ಲಿ ಲಭ್ಯವಿರುತ್ತಾರೆ. ಕಾಂಗ್ರೆಸ್ ಪಕ್ಷ ಅವರನ್ನೇ ಹಣಕಾಸು ಸಚಿವರಾಗಿ ಆಯ್ಕೆ ಮಾಡುವ ವಿಚಾರ ಬೇರೆ. ಅರ್ಥವ್ಯವಸ್ಥೆಯ ನಿರ್ವಹಣೆಗೆ ಬೇಕಾಗುವ ದೃಢನಿಶ್ಚಯ ಮತ್ತು ನಾಯಕತ್ವವನ್ನು ರಾಜಕೀಯ ನಾಯಕರು ನೀಡಬೇಕು. ರಾಜಕೀಯ ಅರ್ಥವ್ಯವಸ್ಥೆಯ ನಿರ್ವಹಣೆ ಕುರಿತ ಪಕ್ಷಿನೋಟವನ್ನು ಅವರು ಹೊಂದಿರಬೇಕು. ಆರ್ಥಿಕ ವಿಚಾರಗಳಲ್ಲಿ ಒಮ್ಮತ ರೂಪಿಸುವ ಕೆಲಸ ಮಾಡಬೇಕು. ಒಮ್ಮತ ಬಾರದೇ ಇದ್ದಾಗ, ತಮ್ಮ ವಾದವನ್ನು ಬಲವಾಗಿ ಮಂಡಿಸಿ, ಟೀಕಾಕಾರರ ಟೀಕೆಗಳಿಗೆ ಮೀರಿ ನಿಲ್ಲುವ ಎದೆಗಾರಿಕೆ ಬೆಳಸಿಕೊಳ್ಳಬೇಕು. ಈ ಗುಣಗಳನ್ನೇ ಶ್ರೀ ರಾವ್ ಮತ್ತು ಶ್ರೀ ವಾಜಪೇಯಿ ಹೊಂದಿದ್ದರು. ಈ ಕಾರಣಗಳಿಗಾಗಿಯೇ ಇತಿಹಾಸದಲ್ಲಿ ಅವರಿಗೆ ವಿಶೇಷ ಸ್ಥಾನವಿದೆ.

ಶ್ರೀ ನರೇಂದ್ರ ಮೋದಿ ತಮ್ಮನ್ನು ಆರ್ಥಿಕ ತಜ್ಞರು ಎಂದು ಎಲ್ಲೂ ಹೇಳಿಕೊಂಡಿಲ್ಲ. ಕಳೆದ 12 ವರ್ಷಗಳಿಂದ ಗುಜರಾತ್ ರಾಜ್ಯದ ಆಡಳಿತವನ್ನು ಉತ್ತಮವಾಗಿ ನಿರ್ವಹಿಸಿ ತಮ್ಮ ದಿಟ್ಟತನ ಹಾಗೂ ಸಾಮರ್ಥ್ಯದ ಪ್ರದರ್ಶನ ನೀಡಿದ್ದಾರೆ. ಗುಜರಾತ್ ರಾಜ್ಯ ಭಾರತದ ಕೈಗಾರಿಕಾ ಕೇಂದ್ರವಾಗಿ ಬೆಳೆದಿದೆ. ಅದೊಂದು ಉತ್ಪಾದನಾ ಕ್ಷೇತ್ರದ ಕೇಂದ್ರಬಿಂದು. ಆ ರಾಜ್ಯದಲ್ಲಿ ಕೃಷಿ ಅರ್ಥವ್ಯವಸ್ಥೆ ಎರಡಂಕಿಯ ಬೆಳವಣಿಗೆ ಸಾಧಿಸಿದೆ. ದೇಶದ ಅನ್ಯ ರಾಜ್ಯಗಳಿಗೆ ಹೋಲಿಸಿದರೆ, ಗುಜರಾತ್ ರಾಜ್ಯದ ಅಭಿವೃದ್ಧಿ ದರ ಹೆಚ್ಚಿದೆ. ಶ್ರೀ ಮೋದಿ ಅವರಂತೆ, ಶ್ರೀ ಚಿದಂಬರಂ ಹಾಗೂ ಅವರ ಪ್ರಧಾನ ಮಂತ್ರಿಗಳು ಟೀಕಾಕಾರರನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯ ಹೊಂದಿಲ್ಲ. ಅವರ ಪಕ್ಷದ ನಾಯಕರು ಅಪ್ರಸ್ತುತ ಸಲಹೆಗಳನ್ನು ನೀಡಿದಾಗಲು, ಅದನ್ನು ವಿರೋಧಿಸದೆ, ಮಣಿದರು. ಇಂದು ಶ್ರೀ ಮೋದಿ ಅವರ ವಿಚಾರದಲ್ಲಿ ಶ್ರೀ ಚಿದಂಬರಂ ಅವರ ಅನಿಸಿಕೆಗಳನ್ನೇ ವೀಕ್ಷಕರು ಹೊಂದಿಲ್ಲ. ನಿಜ ಹೇಳಬೇಕಾದರೆ ಡಾ.ಸಿಂಗ್ ಹಾಗೂ ಶ್ರೀ ಚಿದಂಬರಂ ನಿರ್ಗಮಿಸಿ, ಶ್ರೀ ಮೋದಿ ರಚಿಸುವ ಸರ್ಕಾರದಿಂದ ಹೂಡಿಕೆ ಚಕ್ರ ಪುನಃ ಮುಂದೆ ಸಾಗಲಿದೆ ಎಂಬ ಅನಿಸಿಕೆ ಅವರದ್ದಾಗಿದೆ.

ಗುಜರಾತಿನಲ್ಲಿ ಆರ್ಥಿಕ ಚಟುವಟಿಕೆಗಳನ್ನು ಸೃಷ್ಟಿಸಲು ಮತ್ತು ತ್ವರಿತಗೊಳಿಸಲು ಶ್ರೀ ಮೋದಿ ಸ್ಪಷ್ಟತೆ ಹಾಗೂ ಪ್ರಭಾವಿತನವನ್ನು ಪ್ರದರ್ಶಿಸಿದ್ದಾರೆ. ಅವರ ಸಾಮರ್ಥ್ಯಕ್ಕೆ ಶ್ರೀ ಚಿದಂಬರಂ ಅವರ ಪ್ರಮಾಣಪತ್ರ ಬೇಡ. ಆದರೆ ಪಾರಂಪರಿಕ ವಿವೇಕ ಹೊಂದಿದ ಶ್ರೀ ಚಿದಂಬರಂ ಅವರು ತಮ್ಮ ವಾಸ್ತವಿಕ ಪ್ರಧಾನ ಮಂತ್ರಿ ಅಭ್ಯರ್ಥಿ ಶ್ರೀ ರಾಹುಲ್ ಗಾಂಧಿ ಅವರು ಅರ್ಥಶಾಸ್ತ್ರದಲ್ಲಿ ಹೊಂದಿರುವ ಜ್ಞಾನ ಹಾಗೂ ತಿಳುವಳಿಕೆಯ ಪರಾಕಾಷ್ಠತೆ ಕುರಿತು ನಮಗೆ ತಿಳಸಲು ಬಯಸುತ್ತಾರೆಯೇ?